( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿನಾಂಕ : **06/08/2018**

**ಅಸಲು ದಾವೆ. ನಂ. 02/2013**

( **ಪಾಟೀ ಸವಾಲು** ಎ.ಆರ್.ಜೆ. ವಕೀಲರಿಂದ )

ಲಕ್ಕಯ್ಯ ಎಂದರೆ ನಮ್ಮ ತಂದೆ. ಅವರು ತೀರಿಕೊಂಡು 25 ವರ್ಷಗಳು ಆಗಿವೆ. ಅವರಿಗೆ ಇಬ್ಬರು ಹೆಂಡತಿಯರು. ಮೊದಲನೇಯವರು ಜವರಮ್ಮ 2ನೇಯವರು ನಮ್ಮ ತಾಯಿ ಚೆನ್ನಮ್ಮ. ಜವರಮ್ಮನವರಿಗೆ ತಿಮ್ಮಮ್ಮ, ಸಣ್ಣಮ್ಮ, ಕಾವೇರಮ್ಮ ತಮ್ಮಣ್ಣ ಎಂಬ 4 ಜನ ಮಕ್ಕಳು ಮತ್ತು ನಮ್ಮ ತಾಯಿಗೆ ಪುಟ್ಟಮ್ಮ, ನಾನು, ನಾಗರಾಜು ಮತ್ತು ಧರ್ಮಮ್ಮ ಎಂಬ ಮಕ್ಕಳು. ನಾಗರಾಜು ಈಗ ತೀರಿಕೊಂಡಿರುತ್ತಾರೆ. ನಾಗರಾಜು ತೀರಿಕೊಂಡಿದ್ದು ಅವರಿಗೆ ಮುತ್ತಮ್ಮ ಮತ್ತು ಅವರ ಮಕ್ಕಳು ಕಾವ್ಯ ಮತ್ತು ದರ್ಶನ ಎಂಬ ಮಕ್ಕಳು ಕಾನೂನು ಬದ್ದ ವಾರಸುದಾರರು ಆಗಿರುತ್ತಾರೆ.

ನನ್ನ ದೊಡ್ಡಮ್ಮ ಜವರಮ್ಮನವರು ತೀರಿಕೊಂಡು ಈಗ್ಗೆ ಸುಮಾರು 65 ವರ್ಷಗಳು ಆಗಿರಬಹುದು. ಜವರಮ್ಮನ ಮಕ್ಕಳಲ್ಲಿ ತಿಮ್ಮಮ್ಮ ಮತ್ತು ತಮ್ಮಣ್ಣನವರು ತೀರಿಕೊಂಡಿರುತ್ತಾರೆ ಮತ್ತು ಸಣ್ಣಮ್ಮ ಕಾವೇರಮ್ಮ ಬದುಕಿರುತ್ತಾರೆ. ತಿಮ್ಮಮ್ಮನಿಗೆ 4 ಜನ ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡು ಮಗ. ಅವರು ಕತ್ತಿಮಲ್ಲೇನಹಳ್ಳಿಯಲ್ಲಿ ವಾಸವಾಗಿದ್ದಾರೆ. ಕತ್ತಿಮಲ್ಲೇನಹಳ್ಳಿ ಗ್ರಾಮ ಅರಕಲಗೂಡಿನಿಂದ ಸುಮಾರು 3 ಕಿ.ಮಿ. ಅಂತರ ಇದೆ. ಅದು ಅರಕಲಗೂಡು ಕಸಬಾ ಹೋಬಳಿಗೆ ಸೇರುತ್ತದೆ ಎಂದರೆ ಸರಿ. ಸಣ್ಣಮ್ಮ ಮಾದಿಹಳ್ಳಿಯಲ್ಲಿ ವಾಸವಿದ್ದು ಅದು ಸಹ ಕಸಬಾ ಹೋಬಳಿಗೆ ಬರುತ್ತದೆ. ಕಾವೇರಮ್ಮ ಅರಕಲಕಗೂಡಿನ ನ್ಯಾಯಾಲಯದ ಹಿಂಭಾಗದಲ್ಲಿ ಇರುವ ಜೈಭೀಮಾ ನಗರದಲ್ಲಿ ವಾಸವಾಗಿದ್ದಾರೆ. ತಮ್ಮಣ್ಣನವರ ಹೆಂಡತಿ ಮಕ್ಕಳು ತಮಕೂರು ಜಿಲ್ಲೆಯ ತುರುವೆಕೆರೆಯಲ್ಲಿ ವಾಸವಾಗಿದ್ದಾರೆ. ತಿಮ್ಮಮ್ಮನವರು ತೀರಿಕೊಂಡು ಎರಡು ವರ್ಷವಾಗಿದ್ದು ತಮ್ಮಣ್ಣ ತೀರಿಕೊಂಡು ಒಂದು ವರ್ಷವಾಗಿದೆ.

ದಾವಾ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂಬರ್ ನಲ್ಲಿ ಒಟ್ಟು 2 ಎಕರೆ ಜಮೀನು ಇದೆ. ಸದರಿ ಜಮೀನನ್ನು ನಾನು ನೋಡಿದ್ದೇನೆ. ನಾನು ಈ ದಾವೆಯನ್ನು 37 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹೂಡಿರುತ್ತೇನೆ. ಸದರಿ ಜಮೀನಿನ ಚೆಕ್ಕು ಬಂದಿಃ ಪೂರ್ವಕ್ಕೆ ಸಣ್ಣಪ್ಪ ಮತ್ತು ಪುಟ್ಟಯ್ಯನವರ ಜಮೀನು, ಪಶ್ಚಿಮಕ್ಕೆ ಕುಮಾರ, ಜಯಣ್ಣ ಮತ್ತು ಮರಿಲಿಂಗಯ್ಯನವರ ವಾಸದ ಮನೆಗಳು ಉತ್ತರಕ್ಕೆ ಕೆರೆ, ದಕ್ಷಿಣಕ್ಕೆ ಪುಟ್ಟಯ್ಯನವರ ಹೊಲ ಬರುತ್ತದೆ.

ಈ ದಾವೆಯನ್ನು 37 ಗುಂಟೆ ಜಮೀನು ಮತ್ತು 30x20 ಅಡಿಯ ವಿಸ್ತೀರ್ಣದ ಖಾಲಿ ನಿವೇಶನಕ್ಕೆ ಹೂಡಿರುತ್ತೇನೆ. ನಿವೇಶನದ ಪೂರ್ವ ದಿಕ್ಕಿಗೆ ಪುಟ್ಟಯ್ಯನವರ ಹೊಲ, ಪಶ್ಚಿಮಕ್ಕೆ ದ್ಯಾವಯ್ಯನವರ ಮನೆ, ಉತ್ತರಕ್ಕೆ ರಂಗನವರ ಮನೆ, ದಕ್ಷಿಣಕ್ಕೆ ಬೀದಿ ರಸ್ತೆ. ಸದರಿ ಖಾಲಿ ನಿವೇಶನ ನಮ್ಮ ತಂದೆ ಕೊಂಡುಕೊಂಡ ಆಸ್ತಿಯಾಗಿರುತ್ತದೆ. ನಮ್ಮ ಸದರಿ ಆಸ್ತಿಯನ್ನು ನಮ್ಮ ತಂದೆ ಕ್ರಯಕ್ಕೆ ಪಡೆದು ಸುಮಾರು 80 ವರ್ಷಗಳು ಆಗಿದೆ. ನಮ್ಮ ತಂದೆ 2 ಎಕರೆ ಜಮೀನನ್ನು ಸುಮಾರು 80 ವರ್ಷಗಳ ಹಿಂದೆ ಕ್ರಯಕ್ಕೆ ಪಡೆದಿರುತ್ತಾರೆ

ನಿಮ್ಮ ತಂದೆ ಕ್ರಯಕ್ಕೆ ಪಡೆದ ಕ್ರಯ ಪತ್ರಗಳನ್ನು ನ್ಯಾಯಲಯಕ್ಕೆ ಹಾಜರು ಪಡಿಸಲು ನಿಮಗೆ ಯಾವುದೇ ತೊಂದರೆ ಇದೆಯೇ ಎಂದರೆ ಸಾಕ್ಷಿಯು ಕ್ರಯ ಪತ್ರಗಳು ತನ್ನ ದೊಡ್ಡಮ್ಮ ಜವರಮ್ಮನ ಹೆಸರಿನಲ್ಲಿ ನೋಂದಣಿಯಾಗಿರುತ್ತದೆ ಎಂದು ನುಡಿಯುತ್ತಾರೆ. 2 ಎಕರೆ ಜಮೀನಿನಲ್ಲಿ 37 ಗುಂಟೆ ಜಮೀನು ತಮ್ಮಣ್ಣ ಮತ್ತು 37 ಗುಂಟೆ ನಾಗರಾಜುರವರು ಹಿಸ್ಸೆ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗವಾಗಿ ಸುಮಾರು 15 ವರ್ಷಗಳು ಆಗಿವೆ.

ಮುಂದುವರೆದ ಪಾಟೀ ಸವಾಲು 1 ರಿಂದ 3 ನೇ ಪ್ರತಿವಾದಿಯರ ಪರಃ ಪ್ರತಿವಾದಿ 1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದರಿಂದ ಅನುವತಿಸಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.